ರೈತರ ಸಾಲದ ಚಕ್ರಬಡ್ಡಿ ಮನ್ನಾ ಮಾಡಿರುವ ಬಗ್ಗೆ

೧೦೪೭. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ರೈತರ ಸಾಲಕ್ಕೆ ಚಕ್ರಬಡ್ಡಿ ಮನ್ನಾ ಮಾಡಿರುವುದರಿಂದ ಆದ ನಷ್ಟದ ಹಣ ವೆಷ್ಟು ?

ಆ) ೧೯೪೩-೪೪ ರಲ್ಲಿ ರೈತರ ಬಡ್ಡಿ ಮನ್ನಾ ಮಾಡಿದಾಗ ಸರ್ಕಾರಕ್ಕೆ ತಗುಲಿದ ವೆಚ್ಚ ಹಾಗೂ ನಷ್ಟ ಎಷ್ಟು ?

ಶ್ರೀ ಎಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ಸಹಕಾರ ಸಂಘಗಳಿಂದ ರೈತರು ಪಡೆಯುವ ಸಾಲಕ್ಕೆ ಚಕ್ರಬಡ್ಡಿ ವಿಧಿಸುವ ಕ್ರಮ ಇಲ್ಲದಿರುವುದರಿಂದ ಸರ್ಕಾರವು ಚಕ್ರಬಡ್ಡಿ ಮನ್ನಾ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ೧೯೪೩-೪೪ನೇ ಸಾಲಿನಲ್ಲಿ ಸರ್ಕಾರವು ಬಡ್ಡಿ ರಿಯಾಯಿತಿ ಯೋಜನೆಗಳಡಿಯಲ್ಲಿ ಒಟ್ಟು ರೂ. ೧೫.೩೭ ಕೋಟಿಗಳ ಸಹಾಯಧನವನ್ನು ಸರ್ಕಾರವು ಸಂಬಂಧಪಟ್ಟ ಸಹಕಾರ ಸಂಸ್ಥೆಗಳಿಗೆ ತುಂಬಿ ಕೊಟ್ಟಿದೆ.

ಸರ್ಕಾರದವರು ಸ್ವಾಧೀನಪಡಿಸಿಕೊಂಡ ರೈತರ ಜಮೀನಿನ ವಿಸ್ತೀರ್ಣ.

೮೫೯. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಮಂಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನಲ್ಲಿ ರೈತರು ಕಂದಾಯ ಹಣವನ್ನು ಕಟ್ಟದಿರುವುದರಿಂದ ಸರ್ಕಾರದವರು ಸ್ವಾಧೀನಪಡಿಸಿಕೊಂಡ ರೈತರ ಜಮೀನಿನ ವಿಸ್ತೀರ್ಣವೆಷ್ಟು ?

ಆ) ಈ ರೀತಿ ಸರ್ಕಾರದವರ ವಶಕ್ಕೆ ಬಂದ ಜಮೀನಲ್ಲಿ ಇನ್ನೂ ರೈತರ ವಶದಲ್ಲಿದ್ದು ಅವನ್ನೂ ಕಾನೂನು ರೀತಿ ಅವರಿಗೇ ವಾಪಸ್ಸು ಕೊಡುವ ಆಲೋಚನೆ ಇದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು).—

ಅ) ೧೯೨೫ ರಿಂದ ೧೯೬೫ರ ಅವಧಿಯಲ್ಲಿ ೨೬೯ ರೈತರಿಗೆ ಸಂಬಂಧಿಸಿದಂತೆ ಸ್ವಾಧೀನ ಪಡಿಸಿಕೊಂಡ ಒಟ್ಟು ಜಮೀನಿನ ವಿಸ್ತೀರ್ಣ ೮೫೯.೧೪ ಎಕರೆ.

ಆ) ಹೌದು, ಆದರೆ ಆ ಜಮೀನುಗಳನ್ನು ಬೇರೆ ವಿಧದಲ್ಲಿ ಈ ಮಧ್ಯೆ ವಿಲೇ ಮಾಡಿರಕೂಡದು.

ಆದಾಯ ಪರಿಮಿತಿ ಬಗ್ಗೆ.

೧೦೪೬. ಶ್ರೀ ಸ್ವಾಮಿರಾವ್ (ಹೊಸನಗರ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಂರ್ಬಲರಿಗೆ ೩೬೦೦ ರೂ. ಗಳ ಕನಿಷ್ಟ ಆದಾಯ ಪರಿಮಿತಿ ನಿಗದಿಯಾಗಿ ಎಷ್ಟು ವರ್ಷಗಳಾದುವು ?

ಆ) ಈ ನಿಗದಿತ ಪ್ರಮಾಣವು ಎಲ್ಲಿಯವರೆಗೆ ಮುಂದುವರಿಸಲಾಗುತ್ತಿದೆ ?

ಇ) ಇದರಿಂದ ವಾಸ್ತವಿಕವಾಗಿ ದಂರ್ಬಲರಿಗೆ ಅನುಕೂಲವಾಗಿದೆಯೆ ?

ಶ್ರೀ ಜಿ. ಬಸಪ್ಪಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಶುಲ್ಕ ವಿನಾಯಿತಿ ಎಂಬ ಯೋಜನೆಯು ೧೯೭೯-೮೦ನೇ ಸಾಲಿನಿಂದ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆಗೆ ವಿದ್ಯಾ ಇಲಾಖೆಯಿಂದ ವರ್ಗವಾಗಿದ್ದು ಈಗ ಈ ಇಲಾಖೆಯಲ್ಲಿ

ಕಾರ್ಯಗತವಾಗುತ್ತಿದೆ. ಈ ಯೋಜನೆಯಡಿಯಲ್ಲಿ ಜಾತಿ, ಮತ್ತು ಲಿಂಗಭೇದಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಯಾವ ವಿದ್ಯಾರ್ಥಿಯ ತಂದೆ ತಾಯಿಯರ ಪೋಷಕರ ವಾರ್ಷಿಕ ಆದಾಯವು ೩೬೦೦ ರೂ.ಗಳು ಮತ್ತು ಅದಕ್ಕಿಂತ ಕಡಿಮೆ ಇರುವುದೋ ಅಂತಹ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಪ್ರಯೋಗ ಶಾಲೆ ಶುಲ್ಕ ಮತ್ತು ಪರೀಕ್ಷಾ ಶುಲ್ಕಗಳನ್ನು ಇಲಾಖೆಯು ನೀಡುತ್ತಿದೆ.

ಈ ಶುಲ್ಕ ವಿನಾಯಿತಿಯ ಸೌಲಭ್ಯವನ್ನು ಪಡೆಯಲು ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಎಲ್ ೨೭೩ ಬಿಸಿಎ ೭೮ ದಿನಾಂಕ ೨೭-೩-೭೮ರಲ್ಲಿ ವಾರ್ಷಿಕ ಆದಾಯವನ್ನು ರೂ. ೩೬೦೦ ಗಳಿಗೆ ನಿಗಧಿ ಪಡಿಸಿದೆ.

ಆ) ನಿಗದಿತ ಪ್ರಮಾಣವನ್ನು ಹೆಚ್ಚಿಸುವ ಪ್ರಸ್ತಾವನೆಯು ಇರುವುದಿಲ್ಲ.

ಇ) ಹೌದು.

ಕರ್ನಾಟಕದಲ್ಲಿನ ಸಿ ಮತ್ತು ಡಿ ಭೂಮಿಗಳ ಬಗ್ಗೆ.

೧೧೧೩. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಪಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದ ಪ್ರತಿ ಜಿಲ್ಲೆಯಲ್ಲಿನ ಸರ್ಕಾರಿ ಜಮೀನುಗಳ ವಿಸ್ತೀರ್ಣವೆಷ್ಟು ?

ಆ) ಇದರಲ್ಲಿ ಎ. ಬಿ. ಸಿ, ಮತ್ತು ಡಿ ವರ್ಗಗಳ ಜಮೀನಿನ ವಿಸ್ತೀರ್ಣ,

ಇ) ಅರಣ್ಯ ಇಲಾಖೆಗೆ ವಹಿಸಿಕೊಟ್ಟಿರುವ ಸಿ ಮತ್ತು ಡಿ ವರ್ಗದ ಜಮೀನಿನ ವಿಸ್ತೀರ್ಣ ?

ಈ) ಈ ಜಮೀನುಗಳಲ್ಲಿ ಅನಧಿಕೃತ ಸಾಗುವಳಿಯಲ್ಲಿರುವ ಸರ್ಕಾರಿ ಜಮೀನಿನ ವಿಸ್ತೀರ್ಣ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ)
ಆ)
ಇ)
ಈ) } ಅನುಬಂಧದಲ್ಲಿರುವಂತೆ